# ರಣಬೀರನಿಗೆ 15 ಕೋಟಿ!




'ರಾಕ್‌ಸ್ಟಾರ್' ನಿರೀಕ್ಷೆಗೂ ಮೀರಿ ಗೆದ್ದಿದೆ. ಶಾರೂಕ್ ಖಾನ್‌ನ 'ರಾ ಒನ್' ಇನ್ನೂ ಥಿಯೇಟರ್‌ನಲ್ಲಿ ಇರುವಾಗಲೇ ಬಿಡುಗಡೆಯಾದ ರಣಬೀರ್ ಕಪೂರ್‌ನ 'ರಾಕ್‌ಸ್ಟಾರ್' ಚಿತ್ರ ಕೆಲವು ಕೇಂದ್ರಗಳಲ್ಲಿ 'ರಾ ಒನ್'ನ ಕಲೆಕ್ಷನ್ ಡಲ್ ಹೊಡೆಯಲೂ ಕಾರಣವಾಯಿತಂತೆ! ಅಷ್ಟರ ಮಟ್ಟಿಗೆ ರಣಬೀರ್ ಫುಲ್ ಖುಷ್! ಈ ಖುಷಿಯ ಗಮ್ಮತ್ತಿನಲ್ಲೇ ಮುಂಬೈಯಲ್ಲಿ ರಣಬೀರ್ ನಡೆಸುತ್ತಿದ್ದ ಪಾರ್ಟಿಗೆ ಮಧ್ಯರಾತ್ರಿಯ ಬಳಿಕ ಪೊಲೀಸರು ನುಗ್ಗಿ 'ಟೈಮಾಗಿದೆ, ಬಂದ್ ಮಾಡಿ' ಎಂದದ್ದೂ ಸುದ್ದಿಯಾಗಿದೆ. ಆದರೆ ಅದಕ್ಕಿಂತ ದೊಡ್ಡ ಸುದ್ದಿ ರಣಬೀರನ ಕಾಲ್‌ಷೀಟ್ ದರ ಏಕಾಏಕಿ ಗಗನಕ್ಕೆ ಏರಿದ್ದು!

ಇನ್ನು ಮುಂದೆ ರಣಬೀರ್ ಒಂದು ಚಿತ್ರಕ್ಕೆ 15 ಕೋಟಿ ರೂಪಾಯಿ ಸಂಭಾವನೆ ತೆಗೆದುಕೊಳ್ಳುತ್ತಾನಂತೆ! ಅಷ್ಟು ಕೊಡುವ ತಾಖತ್ತಿದ್ದರೆ ಮಾತ್ರ ನಿರ್ಮಾಪಕರು ಮುಂದೆ ಬರಬಹುದು ಎನ್ನುವ ಸೂಚನೆಯಂತೂ ರಣಬೀರನ ಕಚೇರಿಯಿಂದ ಹೊರಟಾಗಿದೆ. ಸದ್ಯಕ್ಕೆ ರಣಬೀರ್ ಎರಡು ಚಿತ್ರಗಳಲ್ಲಿ ನಟಿಸುತ್ತಿದ್ದಾನೆ. ಅನುರಾಗ್ ಬಸು ನಿರ್ದೇಶನದ 'ಬರ್ಫಿ' ಮತ್ತು ಅಯಾನ್ ಮುಖರ್ಜಿಯ 'ಯೆ ಜವಾನಿ ಹೈ ದಿವಾನಿ' ಎಂಬ ಈ ಎರಡೂ ಚಿತ್ರಗಳಿಗೆ ರಣಬೀರ್ ತಲಾ 8 ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಾನಂತೆ. ಈಗ ರಾಕ್‌ಸ್ಟಾರ್ ಒಮ್ಮೆಲೇ ಆತನಿಗೆ ತಾರಾವರ್ಚಸ್ಸು ತಂದುಕೊಟ್ಟಿದೆ. ಈ ಸಂಭಾವನೆ ಏರಿಕೆಯ ಮೂಲಕ ಆತ ಬಾಲಿವುಡ್ 'ಪ್ರೀಮಿಯರ್ ಸ್ಟಾರ್'ಗಳ ಪಟ್ಟಿಯಲ್ಲಿ ಸೇರಿಕೊಂಡಂತಾಗಿದೆ.

ಬಾಲಿವುಡ್‌ನ ಮೂವರು 'ಖಾನ್' ಕುಳಗಳು ಚಿತ್ರವೊಂದಕ್ಕೆ ಅದರ ಲಾಭದಲ್ಲಿ ಪಾಲು ಪಡೆಯುವುದಲ್ಲದೆ ಸುಮಾರು 27 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಾರೆ. ಹೃತಿಕ್ ರೋಷನ್ ಈಗಾಗಲೆ 20 ಕೋಟಿಯ ಗಡಿ ದಾಟಿದ್ದಾನೆ. ಅಜಯ್ ದೇವಗನ್ 18 ಕೋಟಿ ಬೆಲೆ ಬಾಳುತ್ತಿದ್ದಾನೆ. ಹೀಗಿರುವಾಗ ರಣಬೀರ್ 15 ಪಡೆಯದಿದ್ದರೆ ಹೇಗೆ..? ಎನ್ನುವುದು ಆತನ ಮ್ಯಾನೇಜರ್‌ನ ಪ್ರಶ್ನೆ. ಯಶಸ್ಸು ಕೈಗೆ ಸಿಕ್ಕರೆ, ಸಂಭಾವನೆ ಏರುವುದು ಸಹಜವೇ. ಆದರೆ ನಟನೆಯಲ್ಲಿ ಇನ್ನೂ ರಣಬೀರ್ ಕಲಿಯುವುದು ಸಾಕಷ್ಟಿದೆ ಎಂದು ವಿಮರ್ಶಕರು ಬರೆಯುತ್ತಿದ್ದಾರಲ್ಲ.. ಅದಕ್ಕೇನು ಮಾಡುವುದು?

■ ಬಿಂದು

